ಕರ್ನಾಟಕ ಸರ್ಕಾರ

# ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ (ಜಿಪಂ) ಗಂಗಾವತಿ

## 2016–17 ನೇ ಸಾಲಿನ ಮಾಹಿತಿ ಹಕ್ಕು ಅಧಿನಿಯಮ 2005, ಪ್ರಕರಣ 4(1)(ಬಿ)ಯ ಅಡಿಯಲ್ಲಿ ಪ್ರಕಟಿಸಲಾದ ಸ್ವ–ಇಚ್ಛೆ ಪ್ರಕಟಣೆಯ ವಿವರಗಳು

ಕರ್ನಾಟಕ ಸರಕಾರ

(ತೋಟಗಾರಿಕೆ ಇಲಾಖೆ)

# ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯ

# (ಜಿಲ್ಲಾ ಪಂಚಾಯತ) ಗಂಗಾವತಿ

Email ID:sadhgangavathi@gmail.com ದೂರವಾಣಿ ಸಂಖ್ಯೆ: 08533–230358

ಸಂ:ಹಿಸತೋನಿ:ಜಿಪಂ:ಗಂ:ವಿನಿ1:2017–18 ದಿನಾಂಕ:02.01.2018

## " ಸಾರ್ವಜನಿಕ ಮಾಹಿತಿ ಪ್ರಕಟಣೆ "

### ಮಾಹಿತಿ ಹಕ್ಕು ಅಧಿನಿಯಮ ,2005 ಪ್ರಕರಣ 4(1)(ಬಿ) ಅಡಿಯಲ್ಲಿ ಮಾಹಿತಿ ಪ್ರಕಟಣೆ

1) ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಗಂಗಾವತಿ ರವರ ಕಛೇರಿಯ ಕಾರ್ಯಗಳು ಮತ್ತು ಕರ್ತವ್ಯಗಳು

ತಾಲ್ಲೂಕು ಮಟ್ಟದ ಇಲಾಖಾಧಿಕಾರಿಗಳಾಗಿ ಒಟ್ಟಾರೆ ಆಡಳಿತ ವ್ಯವಸ್ಥೆ ಮತ್ತು ಯೋಜನೆಗಳ ಅನುಷ್ಠಾನದ ಜವಾಬ್ದಾರಿ ಇರುತ್ತದೆ.

ತಾಲ್ಲೂಕು ಮಟ್ಟದ ಅಧಿಕಾರಿಯಾಗಿ ಆಯಾ ಕಾಲಕ್ಕೆ ಸಂಭಂದಿಸಿದಂತೆ ಮೇಲಾಧಿಕಾರಿಗಳಿಗೆ ಮತ್ತು ಅಧೀನ ಅಧಿಕಾರಿಗಳಿಗೆ ಇಲಾಖಾ ಕಾರ್ಯ ಚಟುವಟಿಕೆಗಳಿಗೆ ಸಂಭಂದಿಸಿದಂತೆ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.

ತಾಲ್ಲೂಕು ಮಟ್ಟದಲ್ಲಿ ಇಲಾಖೆ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಗಳು ಕಾರ್ಯ ಚಟುವಟಿಕೆಗಳಿಗೆ ತಾಂತ್ರಿಕ/ಆಡಳಿತ ವಿಚಾರಕ್ಕೆ ಸಂಭಂದಿಸಿದಂತೆ ಪರಿಶೀಲನೆ ಮತ್ತು ಅವಶ್ಯಕತೆಗೆ ಅನುಗುಣವಾಗಿ ಅಧೀನ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡುವುದು ಹಾಗೂ ಹೋಬಳಿವಾರು ಪ್ರಗತಿಯನ್ನು ಪರಿಶೀಲಿಸುವುದು.

ತಾಲ್ಲೂಕು ಮಟ್ಟದಲ್ಲಿ ಅಭಿವೃದ್ದಿ ಮತ್ತು ಯೋಜನೆಗಳಿಗೆ ಸಂಭಂದಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುವುದು. ಅವಶ್ಯಕತೆಗೆ ಅನುಗುಣವಾಗಿ ವಿವಿಧ ಹಂತಗಳಲ್ಲಿ ಅಧಿಕಾರಿಗಳ/ಸಿಬ್ಬಂದಿಗಳ ಕಾರ್ಯ ವ್ಯವಸ್ಥೆಯನ್ನು ಪರಿಶೀಲಿಸುವುದು.

ಅವಶ್ಯಕತೆ/ಸಂದರ್ಭಕ್ಕೆ ಅನುಗುಣವಾಗಿ ಹಾಲಿ ಇರುವ ಜವಾಬ್ದಾರಿ ಮತ್ತು ಕಾರ್ಯ ವ್ಯವಸ್ಥೆಗೆ ಅಧಿಕಾರಿ/ಸಿಬ್ಬಂದಿಯವರಿಗೆ ಹೆಚ್ಚಿನ ಜವಾಬ್ದಾರಿ ನೀಡುವುದು ಮತ್ತು ಕೆಲಸ ನೀಡುವುದು.

ಇಲಾಖೆಯಿಂದ/ಸರ್ಕಾರದಿಂದ ಚಾಲ್ತಿಯಲ್ಲಿರುವ/ಆಯಾ ಕಾಲಕ್ಕೆ ನೀಡಲಾಗಿರುವ ಆರ್ಥಿಕ ಪತ್ಯಾಯೋಜನೆಯಡಿ ನೀಡಲಾಗಿರುವ ಅಧಿಕಾರದ ಪ್ರಕಾರವಾಗಿ ಕಾರ್ಯ ನಿರ್ವಹಿಸುವುದು.

## 4(ಬಿ)(11) ಅಧಿಕಾರಿ/ನೌಕರರ ಅಧಿಕಾರ ಮತ್ತು ಕರ್ತವ್ಯಗಳು

| | |
|---|---|
| ತೋಟಗಾರಿಕೆ ಸಹಾಯಕರು | ಹಿ.ಸ.ತೋ.ನಿ ಯವರ ಸೂಚನೆ ಮತ್ತು ಆದೇಶದ ಮೇರೆಗೆ ಹೋಬಳಿವಾರು ರೈತರ ತಾಕುಗಳಿಗೆ ಭೇಟಿ ನೀಡುವುದು ಮತ್ತು ರೈತರಿಗೆ ತಾಂತ್ರಿಕ ಸಲಹೆ ನೀಡುವುದು.ರೋಗ ಮತ್ತು ಕೀಟ ಬಾಧೆಯ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡುವುದು. ಸೂಕ್ತ ತಾಂತ್ರಿಕ ಮಾಹಿತಿ ಪಡೆದು ರೈತರಿಗೆ ರೋಗ ಕೀಟ ಹತೋಟಿಯಲ್ಲಿ ಸಲಹೆ ನೀಡುವುದು. ಮಣ್ಣು ಹಾಗೂ ನೀರಿನ ಪರೀಕ್ಷೆ ಬಗ್ಗೆ ಮಾಹಿತಿ ನೀಡುವುದು. ಮಾದರಿಗಳನ್ನು ಸಂಗ್ರಹಿಸುವುದು, ಅನುಷ್ಠಾನದಲ್ಲಿರುವ ಇಲಾಖಾ ಯೋಜನೆಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಸಂದರ್ಭಾನುಸಾರ ವಹಿಸುವ ಕಛೇರಿಯ ಇತರೆ ಕೆಲಸಗಳನ್ನು ನಿರ್ವಹಿಸಿಸುವುದು. ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ರವರ ಸೊಚನೆ ಮತ್ತು ಆದೇಶದ ಮೆರೆಗೆ ಕಾರ್ಯನಿರ್ವಹಿಸಿಸುವುದು . |
| ಹೋಬಳಿ ಮಟ್ಟದ ಸಹಾಯಕ ತೋಟಗಾರಿಕೆ ಅಧಿಕಾರಿಗಳು | ಇವರು ಹೋಬಳಿ ಮಟ್ಟದ ತೋಟಗಾರಿಕೆ ಅಧಿಕಾರಿಗಳಾಗಿರುತ್ತಾರೆ. ಸಂಬಂಧಪಟ್ಟ ಹೋಬಳಿ ವಿಸ್ತೀರ್ಣವು ಇವರ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಹೋಬಳಿ ವ್ಯಾಪ್ತಿಯ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪನ್ನ ವಿವರ ಮಾಹಿತಿ ಸಂಗ್ರಹಿಸುವುದು. ಬೆಳೆಯುತ್ತಿರುವ ಬೆಳೆ ಹಾಗೂ ಅದರ ಮಾರುಕಟ್ಟೆಯ ಬಗ್ಗೆ ಮಾಹಿತಿ ಸಂಗ್ರಹಿಸುವುದು. ಗ್ರಾಮವಾರು ತೋಟಗಾರಿಕೆ ಬೆಳೆಗಾರರ ಪಟ್ಟಿ ತಯಾರಿಸುವುದು. ರೈತರು ಬೆಳೆಯುವ ಬೆಳೆಗಳು ಆಯಾಯ ವಾರ್ಷಿಕದಲ್ಲಿ ಆರ್.ಟಿ.ಸಿಯಲ್ಲಿ ದಾಖಲೆ ಮಾಡಿಸುವ ಬಗ್ಗೆ ರೈತರಿಗೆ ಸೂಕ್ತ ಸಲಹೆ ಮತ್ತು ಸಹಕಾರ ನೀಡುವುದು ಮತ್ತು ಎಂಟ್ರಿ ಆಗಿರುವ ಬಗ್ಗೆ ದೃಢೀಕರಿಸುವುದು,ಸಂಸ್ಕರಣಾ ಘಟಕಗಳು ಮತ್ತು ಮಾರುಕಟ್ಟೆಗಳ ವಿವರ ನಿರ್ವಹಿಸುವುದು. ಇಲಾಖೆಯಿಂದ ಅನುಷ್ಠಾನಗೊಳಿಸಲಾಗುವ ವಿವಿಧ ಯೋಜನೆಗಳಡಿಯಲ್ಲಿನ ಕಾರ್ಯಕ್ರಮಗಳ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು. ಫಲಾನುಭವಿಗಳನ್ನು ಗುರುತಿಸಿ ಅನುಮೋದನೆ ಪಡೆಯುವುದು. ಇಲಾಖೆಯ ಆಯಾಯ ಯೋಜನಾ ಮಾರ್ಗಸೂಚಿಗಳನ್ವಯ ಕಾರ್ಯಾನುಷ್ಠಾನಗೊಳಿಸುವುದು. (ಹಿ.ಸ.ತೋ.ನಿ ಕಛೇರಿಯಿಂದ ಹೋಬಳಿಗೆ ನಿಗದಿತ ದಾಸ್ತಾನು ಪಡೆಯುವುದು, ದಾಸ್ತಾನು ಸುಪರ್ದಿ ಹೊಂದಿರುವುದು, ಮಾರ್ಗಸೂಚಿಯನ್ವಯ ಅರ್ಹ ಮತ್ತು ಆಯ್ದ ಫಲಾನುಭವಿಗಳಿಗೆ ವಿತರಿಸುವುದು. ವಿತರಣಾ ವಹಿ ನಿರ್ವಹಿಸುವುದು ಹಾಗೂ ಪರಿಶೀಲನೆಗೆ ಮಂಡಿಸುವುದು)ಪರಿಶೀಲಿಸುವುದು.ಜಿ.ಪಿ.ಎಸ್ ಫೋಟೋ ತೆಗೆಯುವುದು ಸೂಕ್ತ ಸಹಾಯ ಸೌಲತ್ತುಗಳಿಗೆ ಶಿಫಾರಸ್ಸು ಮಾಡುವುದು.ರೈತರ ತಾಕುಗಳಿಗೆ ಭೇಟಿ ಮತ್ತು ತಾಂತ್ರಿಕ ಸಲಹೆ ನೀಡುವುದು. ಋತುಮಾನಾನುಸಾರ ಕಂಡು ಬರುವ: ಉಲ್ಬಣಗೊಳ್ಳುವ ರೋಗ ಮತ್ತು ಕೀಟ ಭಾದೆಯ ಬಗ್ಗೆ ಮೇಲಾಧಿಕಾರಿಗಳಿಗೆ ವರದಿ ಮಾಡುವುದು.ರೋಗ ಮತ್ತು ಕೀಟ ಭಾದೆಯ ನಿಯಂತ್ರಣಕ್ಕೆ ಸೂಕ್ತ ಸಲಹೆ ನೀಡುವುದು,ಹೋಬಳಿ ಮಟ್ಟದಲ್ಲಿ ಕಾಲಕಾಲಕ್ಕೆ ಬೇಕಾಗುವ ಬೀಜಗಳು,ಸಸಿ:ಕಸಿಗಳು ಗೊಬ್ಬರ ಔಷಧಿ ಇತ್ಯಾದಿಗಳನ್ನು ಅಂದಾಜು ಮಾಡಿ ಆಗಿಂದಾಗೆ ಮೇಲಾಧಿಕಾರಿಗಳಗೆ ವರದಿ ಸಲ್ಲಿಸುವುದು.ಇವುಗಳು ಲಬ್ಯವಾಗುವ ಕ್ಷೇತ್ರ,ಸಂಘ ಸಂಸ್ಥೆಗಳ ಮಾಹಿತಿಯನ್ನು ರೈತರ ಮಾಹಿತಿಗಾಗಿ ತಿಳಿಸುವುದು.ಅತಿವೃಷ್ಟಿ:ಅನಾವೃಷ್ಟಿ ಮತ್ತು ಇತರೆ ಕಾರಣಗಳಿಂದ ಫಸಲು ನಷ್ಟ:ನಾಶದ ಸಂದರ್ಭದಲ್ಲಿ ಮಾಹಿತಿ ಸಂಗ್ರಹಿಸುವುದು ಮತ್ತು ಸಲ್ಲಿಸುವುದು.ಆಯಾಯ ಋತುಮಾನದಲ್ಲಿ ಬೆಳೆಗಳ ಬೆಲೆ ಕುಸಿತದ ಬಗ್ಗೆ ವರದಿ ತಯಾರಿಸುವುದು ಮತ್ತು ವರದಿ ಸಲ್ಲಿಸುವುದು.ಮಣ್ಣು ಹಾಗೂ ನೀರಿನ ಪರೀಕ್ಷೆ ಬಗ್ಗೆ ಮಾಹಿತಿ ನೀಡುವುದು.ಮಾದರಿಗಳನ್ನು ಸಂಗ್ರಹಿಸುವುದು.ತೋಟಗಾರಿಕೆ ಬೆಳೆಗಳ ಹೊಸ ಆವಿಷ್ಕಾರಗಳು ಹೊಸ ಕಾರ್ಯಕ್ರಮಗಳು ಹಾಗೂ ತಾಂತ್ರಿಕ ಅಂಶಗಳ ಬಗ್ಗೆ ರೈತರಿಗೆ |

| | |
|---|---|
| | ಮಾಹಿತಿ ನೀಡುವುದು.ಹೊಸ ತಳಿಗಳನ್ನು ಬೆಳಸಲು ರೈತರನ್ನು ಉತ್ತೇಜಿಸುವುದು ಮತ್ತು ತರಬೇತಿ ನೀಡುವುದು.ರೈತರನ್ನು ಶೈಕ್ಷಣಿಕ ಪ್ರವಾಸಕ್ಕೆ ಕರೆದೊಯ್ಯುವುದು,ಹೋಬಳಿ ವ್ಯಾಪ್ತಿಯಲ್ಲಿ ಬರುವ ತೋಟಗಾರಿಕೆ ಕ್ಷೇತ್ರಗಳ ಉಸ್ತುವಾರಿ ನಿರ್ವಹಿಸುವುದು.ವಿವಿಧ ಯೋಜನೆಗಳಡಿಯಲ್ಲಿನ ಫಲಾನುಭವಿಗಳ ವರ್ಷವಾರು ಪಟ್ಟಿ ಇಡುವುದು.ಮೇಲಾಧಿಕಾರಿಗಳ ಕಛೇರಿಯಿಂದ ಪಡೆಯುವ ಪತ್ರಗಳು ಮಾರ್ಗ ಸೂಚಿಗಳು ವಿವಿಧ ಯೋಜನೆಗಳಡಿ ಪರಿಶೀಲನೆಗಾಗಿ ಪಡೆಯುವ ರೈತರ ಅರ್ಜಿಗಳು ಮಾಗೂ ಪಡೆಯುವ ಇತರೆ ಪತ್ರಗಳ ವಹಿಯನ್ನು ಸಮರ್ಪಕವಾಗಿ ನಿರ್ವಹಿಸುವುದು ಮತ್ತು ನಿಯಮ ಮಾರ್ಗಸೂಚಿಗಳನ್ವ್ಯ ಪರಿಶೀಲಿಸಿ ಸಲ್ಲಿಸುವುದು.ಸಹಾಯ ನೀಡುವ ಸಂಭಂದ ಕೆಲವು ಸಂದರ್ಭಗಳಲ್ಲಿ ಬ್ಯಾಂಕ್ ಸಾಲ ಕಡ್ಡಾಯವಾಗಿದ್ದು ಆಸಕ್ತ ಮತ್ತು ಆಯ್ಕೆಗೊಂಡ ರೈತರು ಬ್ಯಾಂಕಗಳಿಂದ ಸಾಲ ಸೌಲಭ್ಯ ಪಡೆಯಲು ಸಹಕರಿಸುವುದು.ರಪ್ತು ಬೆಳೆಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಅನುಷ್ಠಾನಗೊಳಿಸುವುದು ಹಾಗೂ ಸಂದರ್ಭಾನುಸಾರ ವಹಿಸುವ ಕಛೇರಿಯ ಇತರೆ ಕೆಲಸಗಳನ್ನು ನಿರ್ವಹಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ(ತಾಂತ್ರಿಕ ಸಹಾಯಕರು) | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ)ಗಂಗಾವತಿ ರವರಿಗೆ ತಾಂತ್ರಿಕ ಸಹಾಯಕರಾಗಿ ಕಾರ್ಯ ನಿರ್ವಹಿಸುವುದು, ತಾಂತ್ರಿಕ ವಿಭಾಗದ ಪತ್ರಗಳನ್ನು ಸ್ವೀಕರಿಸುವುದು ನಮೂದಿಕರಿಸುವುದು, ಕಡತಗಳ ರಚನೆ, ವಿಷಯ ವಹಿ ನಿರ್ವಹಣೆ, ಕಡತಗಳ ಚಲನ ವಲನ ಕಡತಗಳ ಕಾಪಾಡುವಿಕೆ ಹಂಚಿಕೆಯಾದ ವಿಷಯಗಳನ್ನು ಮಾರ್ಗಸೂಚಿಗಳನ್ವಯ ಪರಿಶೀಲಿಸಿ ಕಡತಗಳನ್ನುರಚಿ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು ಮತ್ತು ಸುಪರ್ದಿಯಲ್ಲಿ ಇಟ್ಟುಕೊಳ್ಳುವುದು, ಪ್ರಗತಿ ವರದಿ ತಯಾರಿಸುವುದು, ವಿವಿಧ ಯೋಜನೆಗಳಿಗೆ ತಾಂತ್ರಿಕ ಮಂಜೂರಾತಿ, ವಿವಿಧ ಯೋಜನೆಗಳಿಗೆ ಸಂಭಂದಿಸಿದಂತೆ ಮಾರ್ಗಸೂಚಿಗಳನ್ವಯ ಪರಿಕರಗಳ ಖರೀದಿಗೆ ಕ್ರಮವಹಿಸುವುದು ದಾಸ್ತಾನು ಪಡೆಯುವುದು,ದಾಸ್ತಾನು ಸುಪರ್ದಿ ಹೊಂದಿರುವುದು, ಮಾರ್ಗಸೂಚಿಯನ್ವಯ ಹೋಬಳಿವಾರು ರೈತ ಸಂಪರ್ಕ ಕೇಂದ್ರಗಳ ಸಹಾಯಕ ತೋಟಗಾರಿಕೆ ಅಧಿಕಾರಿಗಳಿಗೆ ನಿಗದಿತ ಪ್ರಮಾಣದ ಪರಿಕರಗಳನ್ನು ಹಂಚುವುದು ಮತ್ತು ಹೋಬಳಿಗಳಿಂದ ಫಲಾನುಭವಿಗಳ ಪಟ್ಟಿ ಪಡೆದು ಮಂಡಿಸುವುದು ಸಹಾಯಕ, ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಕಾರ್ಯನಿರ್ವಹಿಸುವುದು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರವರ ಆದೇಶದ ಮೇರೆಗೆ ಇತರೆ ಕೆಲಸಗಳನ್ನು ನಿರ್ವಹಿಸುವುದು |

| | |
|---|---|
| ಅಧೀಕ್ಷಕರು | ಕಛೇರಿಯ ಆಡಳಿತ ವಿಭಾಗಕ್ಕೆ ಸಂಭಂದಿಸಿದ ಸಂಪೂರ್ಣ ಕೆಲಸಗಳ ನಿರ್ವಹಣೆ ಹಂಚಿಕೆಯಾದಂತಹ ವಿಷಯಗಳನ್ನು ಸಮರ್ಪಕವಾಗಿ ನಿಯಮಾನುಸಾರ ಪರಿಶೀಲಿಸಿ ಆದೇಶಕ್ಕೆ ಕಡತ ಸಲ್ಲಿಸುವುದು.ನಿರ್ದೇಶನಾಲಯದ ಅಂತರಿಕ ಲೆಕ್ಕ ಪರಿಶೋಧನೆಯ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸುವುದು, ಮಹಾಲೇಖಪಾಲರು ಬೆಂಗಳೂರವರು ಜರುಗಿಸಿದ ಕಛೇರಿಯ ಲೆಕ್ಕ ಪರಿಶೋರ್ಧನಾ ವರದಿಗೆ ಅನುಸರಣಾ ವರದಿಯನ್ನು ಸಲ್ಲಿಸುವುದು. ಜಿಲ್ಲಾ ಪಂಚಾಯತನಿಂದ ಜರುಗಿದ ಹಾಗೂ ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ಕೊಪ್ಪಳ ರವರು ಜರುಗಿಸಿದ ಕಛೇರಿ ತಪಾಸಣೆ ಹಾಗೂ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸುವುದು. ಸಿಬ್ಬಂದಿ/ಅಧಿಕಾರಿಗಳ ವಿರುದ್ದ ಇಲಾಖಾ ವಿಚಾರಣೆ ಹಾಗೂ ಶಿಸ್ತು ಪ್ರಕರಣಗಳ ಕಡತವನ್ನು ನಿರ್ವಹಿಸುವುದು. ನ್ಯಾಯಾಲಯದ ಪ್ರಕರಣಗಳ ಕಡತಗಳ ನಿರ್ವಹಣೆ ಹಾಗೂ ವಿವಿಧ ಯೋಜನೆಗಳಿಗೆ ವಾರ್ಷಿಕವಾಗಿ ಬಿಡುಗಡೆಯಾಗುವ ಅನುದಾನದ ಕಡತ ನಿರ್ವಹಿಸುವುದು. ಕಛೇರಿಯ ಆಡಳಿತ ವಿಷಯಕ್ಕೆ ಸಂಭಂದಿಸಿದಂತೆ ಕಡತಗಳ ನಿರ್ವಹಣೆ ಹಾಗೂ ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತಿಯ ದರ್ಜೆ ಸಹಾಯಕರು ನಿರ್ವಹಿಸುವ ವಿಷಯ ಸಂಕಲನಗಳ ಮೇಲುಸ್ತುವಾರಿ ನಡೆಸುವುದು. ಸಂದರ್ಭಾನುಸಾರ ವಹಿಸುವ ಕಛೇರಿಯ ಇತರೆ ಕೆಲಸಗಳನ್ನು ನಿರ್ವಹಿಸುವುದು, ಸುಪರ್ಧಿಯಲ್ಲಿ ಹೊಂದುವುದು ಮತ್ತು ಪರಿಶೀಲನೆಗೆ ಮಂಡಿಸುವುದು. |
| ಪ್ರಥಮ ದರ್ಜೆ ಸಹಾಯಕರು | ಕಛೇರಿಯ ಆಡಳಿತ ವಿಭಾಗಕ್ಕೆ ಸಂಬಂಧಿಸಿದ ಸಂಪೂರ್ಣ ಕೆಲಸಗಳ ನಿರ್ವಹಣೆ ಹಂಚಿಕೆಯಾದಂತಹ ವಿಷಯಗಳನ್ನು ಸಮರ್ಪಕವಾಗಿ ನಿಯಮಾನುಸಾರ ಪರಿಶೀಲಿಸಿ ಆದೇಶಕ್ಕೆ ಕಡತಗಳನ್ನು ಮಂಡಿಸುವುದು,ಡಿಸಿ/ಎಸಿ ಬಿಲ್ಲಗಳು, ಪ್ರವಾಸ ಭತ್ಯೆ ಬಿಲ್ಲುಗಳನ್ನು ತಯಾರಿಸಿ ಮೇಲು ಸಹಿಗೆ ಸಲ್ಲಿಸುವುದು. ಖರ್ಚು ಹಾಗೂ ಆದಾಯ ತಖ್ತೆ, ಸಿಬ್ಬಂದಿಯವರ ಸೇವಾ ಪುಸ್ತಕಗಳ ನಿರ್ವಹಣೆ, ರಜೆ ಲೆಕ್ಕ ನಿರ್ವಹಣೆ, ರಾಜ್ಯ ವಲಯ ಮತ್ತು ಜಿಲ್ಲಾ ಪಂಚಾಯತ್ ಯೋಜನೆಗಳ ನಗದು ಪುಸ್ತಕ ನಿರ್ವಹಣೆ, ಖಜಾನೆಗೆ ಸಂಭಂದಿಸಿದ ಬಿಲ್ಲು, ಚೆಕ್ ನಿರ್ವಹಣೆ, ಆರ್.ಕೆ.ವಿ.ವೈ, ರಾಜ್ಯ ವಲಯ ಡಿಸಿ ಬಿಲ್ಲುಗಳ ತಯಾರಿಕೆ, ಜಿಲ್ಲಾ ಪಂಚಾಯತ್ ತಾಲ್ಲೂಕ ಪಂಚಾಯತ ಡಿಸಿ ಬಿಲ್ಲುಗಳ ತಯಾರಿಕೆ, ಮೇಲು ಸಹಿಗೆ ಕಳುಹಿಸುವ ಮತ್ತು ಅವುಗಳ ನಿರ್ವಹಣೆ, ಮತ್ತು ಯೋಜನೇತರದಡಿಯಲ್ಲಿ ವೇತನ ಬಿಲ್ಲು ತಯಾರಿಕೆ ಹಾಗೂ ಸಂದರ್ಭಾನುಸಾರ ವಹಿಸುವ ಇತರೆ ಕೆಲಸಗಳನ್ನು ನಿರ್ವಹಿಸುವುದು, ಸುಪರ್ದಿಯಲ್ಲಿ ಹೊಂದುವುದು ಮತ್ತು ಪರಿಶೀಲನೆಗೆ ಮಂಡಿಸುವುದು. |
| ದ್ವಿತಿಯ ದರ್ಜೆ ಸಹಾಯಕರು | ಕಡತಗಳ ರಚನೆ, ವಿಷಯ ವಹಿ ನಿರ್ವಹಣೆ,ಕಡತಗಳ ಚಲನ ವಲನ, ಕಡತಗಳ ಕಾಪಾಡುವಿಕೆ, ಪತ್ರಗಳನ್ನು ಸ್ವೀಕರಿಸುವುದನ್ನು ನಮೂದೀಕರಣ, ಕಡತ ಟಪಾಲುಗಳನ್ನು ಶಾಖೆಯಲ್ಲಿ ಹಂಚುವುದು,ಕಡತಗಳ ರವಾನೆ ಪ್ರತಿಗಳನ್ನು ಮಾಡಿಸುವುದು.ಇವುಗಳ |

| | |
|---|---|
| | ಸಂಪೂರ್ಣ ನಿರ್ವಹಣೆ, ಹಂಚಿಕೆಯಾದ ವಿಷಯಗಳನ್ನು ಸಮರ್ಪಕವಾಗಿ ನಿಯಮಗಳನ್ವಯ ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. ರವಾನೆ ಅಂಚೆ ಚೀಟಿ ನಿರ್ವಹಣೆ, ಪಿಠೋಪಕರಣ ವಹಿ ನಿರ್ವಹಣೆ, ಲೇಖನಾ ಸಾಮಗ್ರಿ ನಿರ್ವಹಣೆ, ಮತ್ತು ಸುಪರ್ದಿಯಲ್ಲಿ ಹೊಂದುವುದು ಮತ್ತು ಪರಿಶೀಲನೆಗೆ ಮಂಡಿಸುವುದು. |

**4(4)ಬಿ (ಃ) :–ನಿರ್ಣಯ ತೆಗೆದು ಕೊಳ್ಳುವಂತಹ ಪ್ರಸ್ತಾವನೆಗಳಲ್ಲಿ ಪಾಲಿಸಬೇಕಾದ ಮೇಲ್ವಿಚಾರಣೆ ಚಾನಲ್‌ಗಳು ಮತ್ತು ಅಕೌಂಟೆಬಿಲಿಟಿ ಸೇರಿದಂತೆ.**

**(The Procedure Followed in the decision making including channels of supervision & accountability)**

| | |
|---|---|
| ತೋಟಗಾರಿಕೆ ಸಹಾಯಕರು | ತಮಗೆ ವಹಿಸಿದ ಹೋಬಳಿಗಳಲ್ಲಿ/ಕಛೇರಿಯಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ | ತಮ್ಮನ್ನು ನೇಮಿಸಿದ ಹೋಬಳಿಗಳಲ್ಲಿ ವಿವಿಧ ತೋಟಗಾರಿಕೆ ಬೆಳೆಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸುವುದು. |
| ತಾಂತ್ರಿಕ ಸಹಾಯಕರು | ತೋಟಗಾರಿಕೆ ಬೆಳೆಗಳ ಬಗ್ಗೆ ತಾಂತ್ರಿಕ ವಿಷಯಗಳ ನಿರ್ವಹಣೆ, ಜಿಲ್ಲಾ ವಲಯ, ರಾಜ್ಯವಲಯ, ಕೇಂದ್ರವಲಯ ಮತ್ತು ತಾಲೂಕಾ ಪಂಚಾಯತ ಯೋಜನೆಗಳ ಮಾರ್ಗಸೂಚಿಯನ್ವಯ ಯೋಜನೆಗಳ ಪರಿಶಿಲನೆ, ಯೋಜನಾ ತಯಾರಿಕೆ ಮತ್ತು ಪ್ರಗತಿ ವರದಿಗಳ ತಯಾರಿಕೆ ಹಾಗೂ ತಾಂತ್ರಿಕ ಮಂಜೂರಾತಿಗೆ ಮೇಲಾಧಿಕಾರಿಗಳಿಗೆ ಮಂಡಿಸುವುದು. ಎಂ.ಎಂ.ಆರ್ ಪ್ರಗತಿ ವರದಿ ತಯಾರಿಸುವುದು. |
| ಅಧೀಕ್ಷಕರು | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಪ್ರಥಮ ದರ್ಜೆ ಸಹಾಯಕರು | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ದ್ವಿತಿಯ ದರ್ಜೆ ಸಹಾಯಕರು | ತಾವು ಸ್ವೀಕರಿಸಿದ ಪತ್ರದ ಸಂಬಂಧ ನಿಯಮಗಳ ಮತ್ತು ಸುತ್ತೋಲೆ/ಸೂಚನೆಗಳನ್ನು ಗಮನಿಸಿ ಮುಂದಿನ ಆದೇಶಕ್ಕಾಗಿ ಕಡತಗಳನ್ನು ವಿಳಂಬವಿಲ್ಲದೆ ತ್ವರಿತವಾಗಿ ಮಂಡಿಸುವುದು. |
| ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಪ್ರಸ್ತಾವನೆ ಮೇಲೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ತಿರ್ಮಾನಿಸಿ ತಮ್ಮ ಹುದ್ದೆಗೆ ನೀಡಿದ ಅಧಿಕಾರಕ್ಕೆ ಒಳಪಟ್ಟು ಅನುಮೋದಿಸಿ/ಮಂಜೂರಾತಿ ನೀಡುವುದು, ಅಗತ್ಯವಾದಲ್ಲಿ ಮೇಲಾಧಿಕಾರಿಗಳ ಕಛೇರಿಗೆ ಶಿಫಾರಸ್ಸು ಮಾಡುವುದು. |

**4(IV)ಬಿ:- ಕೆಲಸ ಕಾರ್ಯಗಳನ್ನು ನಿರ್ವಹಿಸಲು ನಿಗದಿಪಡಿಸಲಾದ ವಿಧಾನಗಳನ್ನು ಕಟ್ಟುಪಾಡುಗಳು,**

## (Norms)
## (The norms set by it for the discharge of its functions)

| | |
|---|---|
| ತೋಟಗಾರಿಕೆ ಸಹಾಯಕರು | ಮೇಲಾಧಿಕಾರಿಗಳ ಆದೇಶದ ಮೇರಗೆ ಹಂಚಿಕೆಯಾದ ಕೆಲಸಗಳನ್ನು ಕಾಲಕಾಲಕ್ಕೆ ಸಮರ್ಪಕವಾಗಿ ನಿರ್ವಹಿಸುವುದು. |
| ಸಹಾಯಕ ತೋಟಗಾರಿಕೆ ಅಧಿಕಾರಿ | ತಾಂತ್ರಿಕ ವಿಚಾರಗಳನ್ನು ಮತ್ತು ವಿವಿಧ ಯೋಜನೆಗಳಿಗೆ ಸಂಬಂಧಿಸಿದಂತೆ ಬರುವ ಪತ್ರಗಳನ್ನು ಪರಿಶೀಲಿಸಿ ಆಯಾ ಕಡತಗಳಿಗೆ ಜೋಡಿಸುವುದು ಹಾಗೂ ರೈತರ ತೋಟಗಳಿಗೆ ಭೇಟಿ ನೀಡಿ ತಾಂತ್ರಿಕ ಸಲಹೆ ನೀಡುವುದು ಹಾಗೂ ಹೋಬಳಿವಾರು ರೈತ ಸಂಪರ್ಕ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ತಾಕುಗಳ ಪರಿಶೀಲನೆ ಮತ್ತು ತಾಂತ್ರಿಕ ಮಾಹಿತಿ ನೀಡುವುದು, ಇಲಾಖೆಯ ಯೋಜನೆಯ ಸೌಲಭ್ಯವನ್ನು ತಿಳಿಯ ಪಡಿಸುವುದು ಇತ್ಯಾದಿ.. |
| ತಾಂತ್ರಿಕ ಸಹಾಯಕರು | ತೋಟಗಾರಿಕೆ ಬೆಳೆಗಳ ಬಗ್ಗೆ ತಾಂತ್ರಿಕ ವಿಷಯಗಳ ನಿರ್ವಹಣೆ, ಜಿಲ್ಲಾವಲಯ, ರಾಜ್ಯವಲಯ, ಕೇಂದ್ರವಲಯ ಯೋಜನೆಗಳ ಮಾರ್ಗಸೂಚಿಯನ್ವಯ ಯೋಜನೆಗಳ ಪರಿಶೀಲನೆ ಯೋಜನೆವಾರು ಪ್ರಗತಿವರದಿಗಳ ತಯಾರಿಕೆ ಹಾಗೂ ತಾಂತ್ರಿಕ ಮಂಜೂರಾತಿಗೆ ಮಂಡಿಸುವುದು ಇತ್ಯಾದಿ.. |
| ಅಧೀಕ್ಷಕರು | ಹಂಚಿಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ನು ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. |
| ಪ್ರಥಮ ದರ್ಜೆ ಸಹಾಯಕ | ಹಂಚಿಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ನು ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. |
| ದ್ವಿತೀಯ ದರ್ಜೆ ಸಹಾಯಕ | ಹಂಚಿಯಾದಂತಹ ವಿಷಯವನ್ನು ಸಮರ್ಪಕವಾಗಿ ನಿಯಮಗಳನ್ನು ಪರಿಶೀಲಿಸಿ ಕಡತವನ್ನು ರಚಿಸಿ ಕಛೇರಿ ಕೈಪಿಡಿಯಲ್ಲಿನ ನಿಯಮಗಳನ್ವಯ ಮುಂದಿನ ಆದೇಶ ಕೋರಿ ಕಡತ ಮಂಡಿಸುವುದು. |
| ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಸಲ್ಲಿಸಲಾದ ಕಡತಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದು ಅಗತ್ಯತೆಗೆ ಅನುಸಾರವಾಗಿ ಮೇಲಾಧಿಕಾರಿಗಳಿಗೆ ಸಲ್ಲಿಸುವುದು, ಜರೂರು ಮತ್ತು ಅದ್ಯತೆಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸುವುದು. |

**(4) (V) (B)** ನೌಕರರು ಅವರವರ ಕರ್ತವ್ಯಗಳನ್ನು ನಿರ್ವಹಿಸಲಾದ ಉಪಯೋಗಿಸುವ ನಿಯಂತ್ರಣದಲ್ಲಿಟ್ಟುಕೊಂಡಿರುವ ನಿಯಮಗಳು/ಸೂಚನೆಗಳ ಕೈಪಿಡಿಗಳು/ದಾಖಲೆಗಳು ಮತ್ತು ನಿಬಂಧನೆಗಳು:

**(The rules regulation Instructions movements and records held by it or it control or used by its employees for discharging its functions)**

1. ಕರ್ನಾಟಕ ನಾಗರೀಕ ಸೇವಾ ನಿಯಮಗಳು (KCSR)
2. ಕರ್ನಾಟಕ ನಾಗರಿಕ ಸೇವಾ ನಿಯಮಗಳು(ವರ್ಗೀಕರಣ ನಿಯಂತ್ರಣ, ಮೇಲ್ಮನವಿ ನಿಯಮಗಳು (CCA Rules)
3. ಕರ್ನಾಟಕ ಆರ್ಥಿಕ ಸಂಹಿತೆ (KFC)
4. ಕಛೇರಿ ಕೈಪಿಡಿ (HBOP)
5. ಆಯುವ್ಯಯ ಕೈಪಿಡಿ (Budget Manual)
6. ಕರ್ನಾಟಕ ಖಜಾನೆ ಸಂಹಿತೆ (KFC)
7. ಸಾದಿಲ್ವಾರು ವೆಚ್ಚ ಕೈಪಿಡಿ (MCE)
8. ಕರ್ನಾಟಕ ನಾಗರಿಕೆ ಸೇವಾ ನಡತೆ ನಿಯಮ (KCS Conduct Rules)
9. ಇಲಾಖಾ ಮತ್ತು ಆರ್ಥಿಕ ಇಲಾಖೆ ಹೊರಡಿಸಿದ ಆರ್ಥಿಕ ಪ್ರತ್ಯಾಯೋಜನೆಗಳು.
10. ಸರ್ಕಾರದ ಅಧಿ ಸೂಚನೆಗಳು (ಸುತ್ತೋಲೆಗಳು) ಇತ್ಯಾದಿ

**(4) (VI) (B) ಕಡತಶೀರ್ಷಕೆ**

| ಕ್ರಸಂ | ಕಡತದ ಶಾಖೆ | | ದಾಖಲೆಗಳ ವಿವರ |
|---|---|---|---|
| 1. | ಸಿಬ್ಬಂದಿ | (EST) | ಇಲಾಖೆಯ ಸಿಬ್ಬಂದಿ ಮತ್ತು ಅಧಿಕಾರಿಗಳ ಆಡಳಿತ ವಿಷಯಕ್ಕೆ ಸಂಬಂಧಸಿದ ವಿಷಯಗಳು |
| 2. | ಲೆಕ್ಕಶಾಖೆ | (ACT) | ಲೆಕ್ಕ ಪತ್ರ ಹಾಗೂ ಲೆಕ್ಕ ಪತ್ರ ಪರಿಶೀಲನೆ. |
| 3. | ಲೇಖನ ಸಾಮಾಗ್ರಿ | (STN) | ಲೇಖನ ಸಾಮಾಗ್ರಿ ದೂರವಾಣಿ, ಸ್ವೀಕೃತಿ ಮತ್ತು ರವಾನೆ. |
| 4. | ನಗದು ಶಾಖೆ | (CASH) | ನಗದು ನಿರ್ವಹಣೆ |
| 5. | ತಾಂತ್ರಿಕ ಶಾಖೆ | (TECH) | ತಾಂತ್ರಿಕ ವಿಷಯಗಳು, ಪ್ರಗತಿ ಪರಿಶೀಲನೆ, ಕ್ರೀಯಾ ಯೋಜನೆ, ಮೌಲ್ಯ ಮಾಪನ ಮತ್ತು ಇತರೆ ವಿಷಯಗಳು. |

(4) (VII) (B):- ಪಾಲಿಸಿಗಳನ್ನು ಮಾಡುವಾಗ ಅಥವಾ ಅನುಷ್ಠಾನಗೊಳಿಸುವ ಸಂಬಂದದಲ್ಲಿ ಇರುವ ಏರ್ಪಾಡುಗಳು ಸಾರ್ವಜನಿಕ ಸದಸ್ಯರುಗಳ ಸಹಭಾಗಿತ್ವ ಮುಂತಾದ ವಿವರಗಳು

(The Particulars of any Arrangement that exists fir consultation with or representation by the member of the Public in relation to the formulation of its Policy or un implementation thereto)

ಯೋಜನೆಗಳ ಅನುಷ್ಠಾನದಲ್ಲಿ ಬರುವ ಸಮಸ್ಯೆಗಳ ಸಂದರ್ಭಗಳಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಸ್ವೀಕರಿಸಲಾಗಿತ್ತದೆ. ಹಾಗೂ ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಇಲಾಖೆಯ ನೀತಿ (ಪಾಲಿಸಿ) ಗಳನ್ನು ನಿರ್ಧರಿಸಲಾಗುವುದು ಹಾಗೂ ಅಗತ್ಯ ನಿರ್ಧಾರ ತೆಗೆದುಕೊಳ್ಳಲಾಗುವುದು.

(4) (VIII) (B). ಈ ಇಲಾಖೆಯಿಂದ ರಚಿಸಲ್ಪಡುವ ಅಥವಾ ಸಲಹೆಗಳನ್ನು ಪಡೆಯುವ ಸಲುವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚಾಗಿರುವ ಸದಸ್ಯರಿಂದ ರಚಿಸಲ್ಪಡುವ ನಿಗಮ ಕೌನ್ಸಿಲ್ಸ್ ಬೋರ್ಡ್ಸ್ ಸಮಿತಿ ಅಥವಾ ಇತರೆ ಬಾಡಿಗಳ ಪಟ್ಟಿ ಹಾಗೂ ಇಂತಹ ಕಮಿಟಿ ಮತ್ತು ಸಮಿತಿಗಳು ನಡೆಸುವ ಸಭೆ ಮತ್ತು ನಡವಳಿಗಳನ್ನು ವೀಕ್ಷಿಸಲು ಸಾರ್ವಜನಿಕರು ವೀಕ್ಷಿಸಬಹುದೇ ಅಥವಾ ಇಂತಃ ಸಭೆಗಳನ್ನು ವೀಕ್ಷಸಲು ಸಾರ್ವಜನಿಕರಿಗೆ ಮುಕ್ತ ಆವಕಾಶವಿದೆ (A Statement of the boards counclls committees and others bodies consisting of two or more persons constituted as its part or for the purpose of its advise,and as to whether meetings of those boards.Counclls, committees and other boodles are open to the publlc or the Minutes of such Meetings are accessible for Publlc)

ತಾಲ್ಲೂಕು ಮಟ್ಟದಲ್ಲಿ ತೋಟಗಾರಿಕೆ ಇಲಾಖೆಯ ಅಧೀನ ಯಾವುದೇ ನಿಗಮ ಕೌನ್ಸಿಲ್ಸ್ ಬೋರ್ಡ್ಸ್ ಸಮಿತಿಗಳು ಕಾರ್ಯನಿರ್ವಹಿಸುತ್ತಿಲ್ಲ

## (4) (IX) (B): ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ ನೌಕರರ ದೂರವಾಣಿ ವಿವರಗಳ ಪಟ್ಟಿ.

| ಕ್ರಸಂ | ಹುದ್ದೆ | ಹೆಸರು | ದೂರವಾಣಿ ಸಂಖ್ಯೆ |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ವಂಕಾ ದುರ್ಗಾಪ್ರಸಾದ | 8861697989<br>08533-230358 |
| 2 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಮಾಂತೇಶ ಪಟ್ಟಣಶೆಟ್ಟಿ | 9482289006 |
| 3 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಚಂದ್ರಶೇಖರ ಕುರಿ | 8722446738 |
| 4 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಅಜರುದ್ದೀನ್ | 8867729889 |
| 5 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ರೇವಣಪ್ಪ ಆರ್ ಬಂಡ್ರಿ | 9686119403 |
| 6 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಶಿವಕುಮಾರ್ ಗಾಂಜಿ | 8147397531 |
| 7 | ಅಧೀಕ್ಷಕರು | ಶ್ರೀ ನಾಗರಾಜ | 9449689502 |
| 8 | ಪ್ರಥಮ ದರ್ಜೆ ಸಹಾಯಕ | ಶ್ರೀ ವಿಷ್ಣುಗೋಪಾಲ | 9986484602 |
| 7 | ದ್ವಿತೀಯ ದರ್ಜೆ ಸಹಾಯಕ | ಶ್ರೀಮತಿ ಡೇನಿಜಾ | 9964488195 |
| 9 | ತೋಟಗಾರಿಕೆ ಸಹಾಯಕ | ಶ್ರೀ ಜಗಧೀಶ | 9886383632 |
| 10 | ತೋಟಗಾರಿಕೆ ಸಹಾಯಕ | ಕು: ಸಾವಿತ್ರಿ ಸಿದ್ದಲಿಂಗಪ್ಪ | 7406923089 |
| 11 | ತೋಟಗಾರಿಕೆ ಸಹಾಯಕ | ಕು: ಶಿವಕಲ್ಲವ್ವ ಕಲ್ಲಪ್ಪ ಕುರಿ | 7760553810 |

**(4) (X) (B) : ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಾರ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರ ಎಪ್ರಿಲ್-2017 ರ ವೇತನದ ವಿವರಗಳ ಪಟ್ಟಿ.**

| | ಹುದ್ದೆ | ಹೆಸರು | ಮೂಲ ವೇತನ |
|---|---|---|---|
| 1 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು | ಶ್ರೀ ವಂಕಾ ದುರ್ಗಾಪ್ರಸಾದ | 28100 |
| 2 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಮಾಂತೇಶ ಪಟ್ಟಣಶೆಟ್ಟಿ | 27400 |
| 3 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಚಂದ್ರಶೇಖರ ಕುರಿ | 25300 |
| 4 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಅಜರುದ್ದೀನ್ | 24600 |
| 5 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ರೇವಣಪ್ಪ ಆರ್ ಬಂಡ್ರಿ | 21600 |
| 6 | ಸಹಾಯ ತೋಟಗಾರಿಕೆ ಅಧಿಕಾರಿ | ಶ್ರೀ ಶಿವಕುಮಾರ್ ಗಾಂಜಿ | 21600 |
| 7 | ಅಧೀಕ್ಷಕರು | ಶ್ರೀ ನಾಗರಾಜ | 21000 |
| 8 | ಪ್ರಥಮ ದರ್ಜೆ ಸಹಾಯಕ | ಶ್ರೀ ವಿಷ್ಣುಗೋಪಾಲ | 17200 |
| 7 | ದ್ವಿತೀಯ ದರ್ಜೆ ಸಹಾಯಕ | ಶ್ರೀಮತಿ ಡೇನಿಜಾ | 15250 |
| 9 | ತೋಟಗಾರಿಕೆ ಸಹಾಯಕ | ಶ್ರೀ ಜಗಧೀಶ | 13900 |
| 10 | ತೋಟಗಾರಿಕೆ ಸಹಾಯಕ | ಕು: ಸಾವಿತ್ರಿ ಸಿದ್ದಲಿಂಗಪ್ಪ | 13900 |
| 11 | ತೋಟಗಾರಿಕೆ ಸಹಾಯಕ | ಕು: ಶಿವಕಲ್ಲವ್ವ ಕಲ್ಲಪ್ಪ ಕುರಿ | 13900 |

(4) (B) (XI) ಆಯುವ್ಯಯ ವಿತರಣೆ :

(Budget Allocation 2017-18 ನೇ ಸಲಿನಲ್ಲಿ ನಿಗದಿಪಡಿಸಿರುವವುದು.

ಈ ಬಗ್ಗೆ ವಿವರವನ್ನು ಅನುಬಂಧ (ಅ) ತಖ್ತೆಯಲ್ಲಿ ಕಾಣಿಸಲಾಗಿದೆ.

(4) (B) (XII): ಸಹಾಯಧನದೊಂದಿಗೆ ನಡೆಸುವ ಯೋಜನೆಗಳು, ಅಂತಹ ಯೋಜನೆಗಳ ಫಲಾನುಭವಿಗಳ ವಿವರ ಮತ್ತು ಮಂಜೂರಾದ ಹಣ 2016-17 ನೇ ಸಾಲಿಗೆ ಸಂಬಂಧಿಸಿದಂತೆ.

ಕ್ರೀಯಾ ಯೋಜನೇಯಡಿ ಅನುಮೊದನೆಯಾದ ಮಾರ್ಗಸೂಚಿಯನುಸಾರ ವಿವಿಧ ಯೋಜನೆಗಳಲ್ಲಿ ಅನುಷ್ಠಾನಗೊಳಿಸಲಾದ ಸಹಾಯಧನದ ಯೋಜೆನೆಗಳಿಗೆ ಸಂಬಂಧಿಸಿದ ಫಲಾನುಭವಿವಾರು ವಿವಿರ ಮತ್ತು ಮಂಜೂರಾದ ಹಣದ ವಿವರಗಳನ್ನು ಕಛೇರಿವಹಿಯಲ್ಲಿ ಬರೆದಿಡಲಾಗುತ್ತದೆ. ಹಾಗೂ ಯೋಜನೆವಾರು ಪಟ್ಟಿ ಮಾಡಿ ತೋಟಗಾರಿಕೆ ಉಪ ನಿರ್ದೇಶಕರಿಗೆ ಪ್ರತಿಯನ್ನು ಸಲ್ಲಿಸಲಾಗುತ್ತದೆ.

(4) (B) (XIII): ಇಲಾಖೆಯಿಂದ ಅಥರೈಸೇಶನ್ ಮಂಜೂರಾದ ಅಥಾವ ಪರವಾನಿಗೆ ನೀಡಲಾದ ಮತ್ತು ಕಡಿಮೆ ದರದಲ್ಲಿ ಸವಲತ್ತುಗಳನ್ನು ಪಡೆಯಲಾದ ರೆಸಿಡೆಯಂಟ್ಸಗಳ ವಿವರಗಳು:

ಅನ್ವಯಿಸುವುದಿಲ್ಲ.

(4) (B) (XIV): ಕುಗ್ಗಿಸಲಾದ ಎಲೆಕ್ಟ್ರಾನಿಕ್ಸ್ ಮಾದರಿಯಲ್ಲಿ ಲಭ್ಯವಿರುವ ಮಾಹಿತಿಯ ವಿವರ,ದೊರಕುವಿಕೆ ಅಥಾವ ಮಾಹಿತಿ ಇಟ್ಟುಕೊಂಡಿರುವುಕೆ.

ತಾಲೂಕು ಮಟ್ಟದಲ್ಲಿ ಲಭ್ಯವಿರುವ ಗಣಕ ಯಂತ್ರದಲ್ಲಿ ಮಾಹಿತಿಯನ್ನು ಅಳವಡಿಸಿದೆ ಹಾಗೂ ಕಾಯ್ದಿರಿಸಲಾಗಿರುತ್ತದೆ.

(4) (B) (XV):ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಅವಕಾಶಗಳು ವಿವರಗಳು ಗ್ರಂಥಾಲಯ ಅಥವಾ ಒದುವ ಕೊಠಡಿಗಳನ್ನು ಸಾರ್ವಾಜನಿಕ ಉಪಯೋಗಕ್ಕಾಗಿ ತೆರೆದಿದೆಯೇ-?

ತಾಲೂಕು ಮಟ್ಟದ ಕಛೇರಿಯಲ್ಲಿ ಸಾರ್ವಜನಿಕರಿಗೆ ಮಾಹಿತಿ ಲಭ್ಯವಾಗುವ ಮಾದರಿಯಲ್ಲಿ ಯಾವುದೇ ಗ್ರಂಥಾಲಯ ಅಥವಾ ಒದುವ ಕೊಠಡಿಗಳು ಇರುವುದಿಲ್ಲ.

(4) (B) (XVI) : ಸಾರ್ವಜನಿಕ ಮಾಹಿತಿ ಅಧಿಕಾರಿಯ ಹೆಸರು, ಪದನಾಮ ಮತ್ತು ಇತರೆ ವಿವರಗಳು:

(The names designations and other particulars of the public Information officers)

ಶ್ರೀ ವಂಕಾ ದುರ್ಗಾಪ್ರಸಾದ.
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಲ್ಲಾ ಪಂಚಾಯತ) ಗಂಗಾವತಿ
Pho:- 8861697989, 08533-230358
ಮತ್ತು
ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ
ಶ್ರೀ ಅಜರುದ್ದೀನ್ ಗುಳ್ಳೆದಗುಡ್ಡ, ಸಹಾಯಕ ತೋಟಗಾರಿಕೆ ಅಧಿಕಾರಿ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು
(ಜಿಲ್ಲಾ ಪಂಚಾಯತ) ರವರ ಕಛೇರಿ ಗಂಗಾವತಿ
Pho:- 8867729889, 08533-230358
ಈ ಕಛೇರಿಯ E-Mail ID-sadhgangavathi@gmail.com

# 2016–17 ನೇ ಸಾಲಿನ
# ಮಾಹಿತಿ ಹಕ್ಕು ಅಧಿನಿಯಮ 2005,
# ಪ್ರಕರಣ 4(1) (ಎ) ಮತ್ತು 4(1)(ಬಿ)ಯ ಅಡಿಯಲ್ಲಿ ಪ್ರಕಟಿಸಲಾದ
# ಸ್ವ–ಇಚ್ಛೆ ಪ್ರಕಟಣೆಯ ವಿವರಗಳು

2016–17 ನೇ ಸಾಲಿನ **ಮಾಹಿತಿ ಹಕ್ಕು ಅಧಿನಿಯಮ 2005, ಪ್ರಕರಣ** 4(1) (ಎ) ಮತ್ತು 4(1)(ಬಿ)**ಯ ಅಡಿಯಲ್ಲಿ ಪ್ರಕಟಿಸಲಾದ ಸ್ವ–ಇಚ್ಛೆ ಪ್ರಕಟಣೆಯ ವಿವರಗಳು**